ಆದರೆ ಪರಿಸ್ಥಿತಿಯನ್ನು ಅವರಿಗೆ ಅರಿವು ಮಾಡಿಕೊಡುವುದರಲ್ಲಿ ನಾವು ಯಶಸ್ವಿ ಆಗಿದ್ದೇವೆ ಎನ್ನುವುದೇ ನಮ್ಮ ಸಂತೋಷ.

(ಶ್ರೀ ಬಸವರಾಜ ಪಾಟೀಲ್ ಅಟ್ಟೂರು ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಿಯಮ 334ರ ಮೇರೆಗೆ ಚರ್ಚೆ

1) ಬ್ರಹ್ಮಾವರ ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೇ ತಿಂಗಳಲ್ಲಿ ನಡೆದ ಕೊಲೆ ಪ್ರಕರಣ.

ಶ್ರೀ ಪಿ. ಬಸವರಾಜು (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ನೀಲಾವರ ಗ್ರಾಮದ ಎಳ್ಳಂಪಳ್ಳಿಯಲ್ಲಿ ದಿನಾಂಕ: 23-5-91ರಂದು ಹಾಡುಹಗಲೇ ಭಾಸ್ಕರ ನಾಯ್ಕ ಎನ್ನುವ ವ್ಯಕ್ತಿಯೋರ್ವರನ್ನು ಅದೇ ಗ್ರಾಮದ ಕೆಲವರು ಅಮಾನುಷವಾಗಿ ಕೊಲೆಗೈದಿರುತ್ತಾರೆ. ಈ ವಿಷಯದ ಕುರಿತು ಸ್ಥಳೀಯ ಪ್ರಮುಖ ದಿನಪತ್ರಿಕೆಯು ವರದಿ ಮಾಡಿರುತ್ತದೆ. ಈ ಸಂಬಂಧ ಸ್ಥಳೀಯ ಗ್ರಾಮಸ್ಥರು ಸಂಭಾವ್ಯ ಆಪಾದಿತರ ಸುಳಿವು ಪೋಲೀಸರಿಗೆ ನೀಡಿದ್ದಾಗ್ಯೂ ಇದುವರೆಗೆ ಆಪಾದಿತರನ್ನು ಪತ್ತೆ ಹಚ್ಚುವಲ್ಲಿ ಪೊಲೀಸರು ಅಸಮರ್ಥರಾಗಿರುತ್ತಾರೆ. ನಾನು ವೈಯುಕ್ತಿಕವಾಗಿ ಜಿಲ್ಲಾ ಪೊಲೀಸ್ ಅಧಿಕಾರಿಯವರಿಗೆ ಈ ಕುರಿತು ಪತ್ರ ಬರೆದಿದ್ದೆ ಆದರೆ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಸ್ಥಳೀಯ ಪೊಲೀಸರೆ ಆಪಾದಿತರಿಗೆ ರಕ್ಷಣೆ ನೀಡುತ್ತಿದ್ದಾರೆನ್ನು ಮಾಹಿತಿಯು ಗ್ರಾಮಸ್ಥರನ್ನು ಭಯಭೀತರಾಗಿಸಿದೆ. ಈ ಸಂಬಂಧ ಈಗ ಕೈಗೊಂಡ ಕ್ರಮವನ್ನು ಮತ್ತೆ ಮುಂದೆ ಕೈಗೊಳ್ಳುವ ಕ್ರಮದ ವಿವರದ ಕುರಿತು ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ:

ಶ್ರೀ ಧರ್ಮಸಿಂಗ್ (ಗೃಹಸಚಿವರು) : ಸನ್ಮಾನ್ಯ ಅಧ್ಯಕ್ಷರೇ,

ಈ ಪ್ರಕರಣದ ಬಗ್ಗೆ ಪಶ್ಚಿಮ ವಿಭಾಗದ ಮಂಗಳೂರಿನ ಡಿ.ಐ.ಜಿ.ಯವರಿಂದ ವಿವರಗಳನ್ನು ಪಡೆದುಕೊಂಡಿದ್ದೇನೆ. ಈ ಪ್ರಕರಣದ ವಿವರಗಳು ಹೀಗಿವೆ:

ಬ್ರಹ್ಮಾವರ ಪೋಲೀಸ್ ಠಾಣೆಯಲ್ಲಿ ಮೇ ತಿಂಗಳಲ್ಲಿ ಒಂದು ಕೊಲೆ ಪ್ರಕರಣದ ಅಪರಾಧ ದಾಖಲಾಗಿದೆ. ದಿನಾಂಕ 29-5-91ರ ರಾತ್ರಿ ಸುಮಾರು 9.30ಸಮಯದಲ್ಲಿ ಯಲ್ಲಂಪಲ್ಲಿ ನೀಲಾವರ ಗ್ರಾಮದ ಮಂಜುನಾಥ ನಾಯಕ್ ಅವರ ಮಗ ಭಾಸ್ಕರ ನಾಯಕ್ ಅವರು ಕುಂಜಾಲುನಿಂದ ಅವರ ಮನೆ ಕಡೆಗೆ ಹೋಗುತ್ತಿದ್ದರು. ದೀಪನಗುಡ್ಡೆ ಬಸ್ ನಿಲ್ದಾಣದ ಸಮೀಪ ಮೂರ್ನಾಲ್ಕು ಜನ ಅಪರಿಚಿತರು ಇವರನ್ನು ಅಪಾಯಕಾರಿ ಆಯುಧಗಳಿಂದ (ಕ್ಲಬ್) ಅಸಾಲ್ಟ್ ಮಾಡಿದರು. ಈ ಕಿರಣದಿಂದ ಸದರಿಯವರಿಗೆ ರಕ್ತಸ್ರಾವದ ಗಾಯಗಳಾಗಿ ಸ್ಥಳದಲ್ಲೇ ನೆಲದ ಮೇಲೆ ಬಿದ್ದರು. ಮರುದಿನ ಅಂದರೆ 30-5-91ರಂದು ಬೆಳಿಗ್ಗೆ, ಸದರಿ ಬಸ್ ನಿಲ್ದಾಣದ ಸಮೀಪವೇ ವಾಸವಾಗಿರುವ ಇವರ ಸಹೋದರಿ ಪಾರ್ವತಿ ಎನ್ನುವವರು ಇದನ್ನು ಗಮನಿಸಿದರು. ಹಾಗೂ ವಿಚಾರಿಸಿದಾಗ, ಗಾಯಗೊಂಡಿದ್ದ ಸದರಿ ಭಾಸ್ಕರ ನಾಯಕ್ ಅವರು ಅಪರಿಚಿತ ನಾಲ್ಕು ಜನ ತಮ್ಮನ್ನು ಕಳೆದ ರಾತ್ರಿ ಆಯುಧಗಳಿಂದ ಹೊಡೆದರೆಂದು ತಿಳಿಸಿದರು. ಶ್ರೀಮತಿ ಪಾರ್ವತಿಯವರು ಆತನಿಗೆ ಕುಡಿಯಲು ನೀರು ಕೊಟ್ಟು ನಂತರ ತನ್ನ ಇಬ್ಬರು ತಮ್ಮಂದಿರು ಸದಾಶಿವ ನಾಯಕ್ ಮತ್ತು ಬಾಲಕೃಷ್ಣ ನಾಯಕ್ ಇವರಿಗೆ ಈ ವಿಷಯವನ್ನು ತಿಳಿಸಿದರು. ಸದಾಶಿವ ನಾಯಕ್ ಅವರು ತಕ್ಷಣ ಸ್ಥಳಕ್ಕೆ ಬಂದು ಬ್ರಹ್ಮಾರರದಿಂದ ಆಂಬುಲೆನ್ಸ್ ಒಂದನ್ನು ತರಿಸಿಕೊಂಡು ಗಾಯಾಳುವನ್ನು ಉಡುಪಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಿ ಅಲ್ಲಿ ಅವರನ್ನು ದಾಖಲಾಡ್ಡಿಸಿದರು. ಅಲ್ಲಿ ಉಪಚಾರದ ಲ್ಲಿದ್ದಾಗ ಸಂಜೆ ಸುಮಾರು 6-45ರ ಸಮಯದಲ್ಲಿ ಸದರಿ ಗಾಯಾಳು ಮೃತರಾದರು. ಈ ವಿಚಾರದಲ್ಲಿ ಶ್ರೀ ಸದಾಶಿವ ನಾಯಕ್ ಅವರ ದೂರಿನ ಮೇಲೆ ಬ್ರಹ್ಮಾವರ ಪೋಲೀಸ್ ಠಾಣೆಯಲ್ಲಿ ದಿನಾಂಕ 30-5-91ರಂದು ಕ್ರೈಮ್ ನಂ.50-91 ಅನ್ನು ದಾಖಲಾಡ್ಡಿಕೊಳ್ಳಲಾಗಿದೆ. ಈ ದೂರಿನಲ್ಲಿ ಮೃತನಾದ ತನ್ನ ತಮ್ಮ ಭಾಸ್ಕರ ನಾಯಕನಿಂದ ತನಗೆ ಗೊತ್ತಾದ ವಿವರಗಳನ್ನು ತಿಳಿಸಿದ್ದಾರೆ.

ದಿನಾಂಕ 31-5-91ರಂದು ಮೃತರ ಸಂಬಂಧಿಗಳು ಮತ್ತು ಪಂಚರ ಸಮಕ್ಷಮದಲ್ಲಿ ಮೃತನ ದೇಹದ ಇಂಕ್ವೆಸ್ಟ್ ಮಾಡಲಾಯಿತು.

ಕುಂದಾಪುರ ಸರ್ಕಲ್ ಇನ್‌ಸ್ಪೆಕ್ಟರ್ ಅವರು ಶ್ರೀಮತಿ ಪಾರ್ವತಿ ಮತ್ತು ಇತರರನ್ನು ಬೇಟಿಯಾಗಿ ತನಿಖೆ ಮಾಡಿಸಿದ್ದಾರೆ. ಇದುವರೆಗೂ ಅಪರಾಧಿಗಳ ಬಗ್ಗೆ ಅಥವಾ ಅಪರಾಧದ ಬಗ್ಗೆ ಯಾವ ಸುಳಿವೂ ಸಿಕ್ಕಿಲ್ಲ. ಜುಲೈ 91ರ ಮೊದಲನೇ ವಾರದಲ್ಲಿ ನೀಲಾವರ ಗ್ರಾಮದವರೆಂದು ಹೇಳಲಾದ ಒಂದು ಅನಾಮಧೇಯ ಪತ್ರ ಬಂದಿದ್ದು ಇದರಲ್ಲಿ ಮೃತನ ಚಿಕ್ಕ ತಮ್ಮ ಬಾಲಕೃಷ್ಣ ನಾಯಕ್ ಮತ್ತು ಇತರೆ ಎಂಟು ಜನ ಈ ಕೊಲೆಗೆ ಜವಾಬ್ದಾರರೆಂದು ಈ ಪತ್ರದಲ್ಲಿ ತಿಳಿಸಲಾಗಿತ್ತು. ಈ ವಿಚಾರವನ್ನು ಆಧರಿಸಿ ತನಿಖೆ ನಡೆಸಲಾಯಿತು. ಇವರ ಪೈಕಿ ಸಂತೋಷ್ ಕುಮಾರ್ ಹೆಗ್ಡೆ ಎನ್ನುವವರು ತಲೆ ತಪ್ಪಿಸಿಕೊಂಡಿದ್ದಾರೆಂದು ತಿಳಿದು ಬಂದಿತು. ಇತರ ಜೊತೆಗೆ ದಿನಾಂಕ 24-8-91ರಂದು ಇಂಥದೇ ಒಂದು ಅನಾಮಧೇಯ ಪತ್ರವನ್ನು ಮಾನ್ಯ ಸದಸ್ಯ ಶ್ರೀ ಪಿ. ಬಸವರಾಜ್ ಅವರೂ ಸಹ ಡಿ.ಐ.ಜಿ.ಯವರಿಗೆ ಕಳುಹಿಸಿದರು. ಈ ಪತ್ರದಲ್ಲೂ ಸಹ ಮೇಲ್ಕಂಡವರ ಹೆಸರುಗಳು ಸೂಚಿಸಲ್ಪಟ್ಟಿದ್ದು ಇವರು ಚಕ್ರಾಡಿ ಗ್ರಾಮದ ಉದಯಶೆಟ್ಟಿ, ಬ್ರಹ್ಮಾವರದ ಅಭಿನೇತ್ರಿ ಮತ್ತು ಕೊಕ್ಕರಣೆ ಗ್ರಾಮದ ಸೀತಾರಾಮ ಹೆಗ್ಡೆ ಮತ್ತು ಇನ್ನೂ ಇತರ ಮೂವರ ಮನೆಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆಂದೂ ತಿಳಿಸಲಾಗಿತ್ತು. ಈ ಪತ್ರಗಳನ್ನು ಕೊಡುತ್ತಾ ಶ್ರೀ ಬಸವರಾಜ್ ಅವರು ಈ ಪ್ರಕರಣವನ್ನು ಕೂಲಂಕುಶವಾಗಿ ತನಿಖೆ ಮಾಡಬೇಕೆಂದು ಸಹ ತಿಳಿಸಿದರು. ಇದರಂತೆ ಈ ಆರು ಜನರ ಮನೆಗಳನ್ನು ಉಡುಪಿ ಡಿ.ವೈ.ಎಸ್.ಪಿ. ಕುಂದಾಪುರ ಮತ್ತು ಬ್ರಹ್ಮಾವರದ ಸಿ.ಪಿ.ಐ. ಮತ್ತು ಸಿಬ್ಬಂದಿಯವರು ತಕ್ಷಣ ತಪಾಸಣೆ ಮಾಡಿದರು. ತಪಾಸಣೆಯಿಂದ ಯಾವ ಸುಳಿವುಗಳೂ ದೊರೆತಿಲ್ಲ. ಶ್ರೀ ಸಂತೋಷ್ ಹೆಗಡೆ, ಹರೀಶ್ ಶೆಟ್ಟಿ ಮತ್ತು ಅರುಣ ಹೆಗ್ಗಡೆ ಇವರ ಮನೆಗಳನ್ನೂ ಸಹ ತಪಾಸಣೆ ಮಾಡಲಾಯಿತು. ಇದುವರೆಗೂ ಇವರ ಸುಳಿವು ಸಿಕ್ಕಿಲ್ಲ. ಉಡುಪಿ ಡಿ.ಎಸ್.ಪಿ. ಮತ್ತು ಕುಂದಾಪುರದ ಸಿ.ಪಿ.ಐ. ಇವರು ಖುದ್ದಾಗಿ ತನಿಖೆ ಮುಂದುವರೆಸಿದ್ದು ಗೋಪ್ಯವಾಗಿಯೂ ಸಹ ತನಿಖೆ ಮುಂದುವರೆಸಿದ್ದಾರೆ. ಆದರೂ, ಸದರಿ ಸಂತೋಷ ಹೆಗ್ಗಡೆ, ಹರೀಶ್ ಶೆಟ್ಟಿ ಮತ್ತು ಅರುಣ್ ಹೆಗ್ಗಡೆ ಇವರುಗಳು ಈ ಕೊಲೆ ಬಗ್ಗೆ ಹೊಂದಿರಬಹುದಾದ ಯಾವುದೇ ಸುಳಿವಿನ ಬಗ್ಗೆಯೂ ಯಾರೂ ವರ್ತಮಾನ ನೀಡಿಲ್ಲ.

ತನಿಖೆಯಿಂದ ಹೊರಬಂದ ಇನ್ನೊಂದು ವಿಚಾರವೆಂದರೆ, ಕಳೆದ 1985ನೇ ಮೇ ತಿಂಗಳಲ್ಲಿ ಮೃತನು ತಮ್ಮ ನರೆಯ ಕುಮಾರಿ ಲೀಲಾ ಎಂಬುವರ ಮೇಲೆ ಅತ್ಯಾಚಾರ ನಡೆಸಿದ್ದು ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಯಾಗಿ, ಜೀವಾವಧಿ ಶಿಕ್ಷೆ ವಿಧಿಸಲ್ಪಟ್ಟಿದ್ದು, 1987ರಲ್ಲಿ ಸಲ್ಲಿಸಿದ ಮೇಲ್ಮನವಿಯ ಪ್ರಕಾರ ಹೈಕೋರ್ಟ್‌ನಲ್ಲಿ ಅಕ್ವಿಟ್ ಆದನೆಂದು ಮತ್ತು ಅವಿವಾಹಿತನಾಗಿದ್ದನೆಂದೂ, 1990ರ ಅಕ್ಟೋಬರ್‌ನಲ್ಲಿ ನೀಲಾವರಕ್ಕೆ ವಾಪಸ್ ಬಂದಿದ್ದನೆಂದೂ ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಕುಮಾರಿ ಲೀಲಾ ಇವರ ಸಂಬಂಧಿಗಳನ್ನು ಸಹ ಈ ಕೊಲೆಯ ಬಗ್ಗೆ ತನಿಖೆ ಮಾಡಲಾಗಿದೆ. ಇವರಿಂದಲೂ ಸಹ ಯಾವ ಸುಳಿವೂ ದೊರೆತಿಲ್ಲ. ತನಿಖೆ ಮುಂದುವರೆದಿದೆ. ಈ ತನಿಖೆಗಾಗಿ ಉಡುಪಿ ಡಿ.ಎಸ್.ಪಿ.ಯವರ ಒಂದು ವಿಶೇಷ ದಳವನ್ನು ರಚಿಸಲಾಗಿದೆ. ಆಪಾದಿತರನ್ನು ಪತ್ತೆ ಹಚ್ಚಲು ಪ್ರಾಮಾಣಿಕ ಪ್ರಯತ್ನ ಮುಂದುವರೆದಿದೆ.

ಮಾನ್ಯ ಅಧ್ಯಕ್ಷರೇ, ಈ ಎಲ್ಲ ವಿವರಗಳನ್ನು ನಮ್ಮ ಡಿ.ಐ.ಜಿ.ಯವರು ಶ್ರೀ ಬಸವರಾಜ್ ಅವರಿಗೂ ವಿವರಿಸಿದ್ದಾರೆ.

ಚೇರ್‌ಮನ್ : ಈಗ ಸಭೆಯಲ್ಲಿ ಶ್ರೀ ಸಿದ್ಧಯ್ಯನವರು ಹಾಜರಿಲ್ಲ. ಆದ್ದರಿಂದ ಶ್ರೀ ಅನಂತಕೃಷ್ಣ ಅವರು ನಿಯಮ 334ರ ಮೇರೆಗೆ ವಿಷಯ ಪ್ರಸ್ತಾಪ ಮಾಡಬಹುದು.